



▶▶ ಮುಖಪುಟ ಆಕರ್ಷಕವಾಗಿತ್ತು. ಕಾದಂಬರಿಕಾರ ಕೆ.ಟಿ. ಗಟ್ಟಿ ಅವರೊಂದಿಗೆ ನರೇಂದ್ರ ಪೈ ಅವರು ನಡೆಸಿದ ಮಾತುಕತೆ ಚೆನ್ನಾಗಿ ಮೂಡಿಬಂದಿದೆ. ಶಶಿಧರ ಡೋಂಗ್ರೆ ಅನುವಾದಿಸಿರುವ ವಲಿ ಖಲೀಲಿ ಅವರ 'ಒಂದು ಸಾರ್ವಜನಿಕ ನೇಣಿನ ವರದಿ' ಹೊಸ ಲೋಕದ ದರ್ಶನ ಮಾಡಿಸಿತು. ಝೆನ್ ಕಥೆಗಳು ಮತ್ತು ಪರಂಜ್ಯೋತಿ ಅವರ ನೆನಪಿನಚಿತ್ರ 'ರಸಿಕ ಕವಿ ಪು.ತಿ.ನ.', 'ನವಿಲುಗರಿ'ಯಲ್ಲಿ ಪ್ರಕಟವಾದ ಉಮಾ ರಾವ್ ಅವರ 'ಶೂ ಪಾಲಿಶ್ ಹುಡುಗ' ಅದ್ಭುತವಾಗಿ ಓದಿಸಿಕೊಳ್ಳುತ್ತವೆ.

**ಎಸ್. ದೇವಿಂದ್ರಪ್ಪ, ಬಿ. ಕುಮನೂರ, ಯಾದಗಿರಿ**

▶▶ ಕೆ.ಟಿ. ಗಟ್ಟಿ ಅವರೊಂದಿಗಿನ ಮಾತುಕತೆ ಓದಿದಾಗ ಒಮ್ಮೆಲೇ ಭಾವುಕಳಾದೆ. ಕಾದಂಬರಿಕಾರರಲ್ಲಿ ಎದ್ದು ಕಾಣುವ ಹೆಸರು ಗಟ್ಟಿ ಅವರದು. ಅವರ ಎಲ್ಲ ಕಾದಂಬರಿಗಳು ನನ್ನ ಪುಟ್ಟ ಭಂಡಾರದಲ್ಲಿ ಇವೆ. ಅವರ ವಿಚಾರಗಳು ಲಭ್ಯವಾದದ್ದು ನಿಜಕ್ಕೂ ಅತ್ಯಂತ ಸಂತೋಷ ತಂದಿತು.

**ರಾಧಾ ಟೇಕಲ್, ಬೆಂಗಳೂರು**

▶▶ ಕೆ.ಟಿ. ಗಟ್ಟಿಯವರ ಸಂದರ್ಶನ ಅಮೂಲ್ಯವಾಗಿದೆ. ಅವರ ಜೀವನದ ವಿವಿಧ ಸನ್ನಿವೇಶಗಳು, ವಿಚಾರಗಳು ಹೊಸ ಆಲೋಚನೆಗೆ ಎಡೆ ಮಾಡಿಕೊಟ್ಟಿವೆ. ಈ ಸಂದರ್ಶನವನ್ನು ಸಂದರ್ಶಕರು ಉತ್ತಮವಾಗಿ ನಿರೂಪಿಸಿದ್ದಾರೆ.

**ಎನ್. ಮಹಾದೇವ, ಚೆನ್ನೈ**

▶▶ ಎಸ್.ಎಫ್. ಯೋಗಪ್ಪನವರ ಅವರ ನೀಳ್ಗತೆ 'ತಂಗಿಯ ಮನೆ' ಬಾಗಲಕೋಟೆ, ವಿಜಾಪುರ ಭಾಷೆಯ ದನಿ–ಬನಿಯಲ್ಲಿ ಉತ್ತಮವಾಗಿ ಮೂಡಿಬಂದಿದೆ. ವಿದೇಶದಲ್ಲಿ ಬಿಸಿನೆಸ್ ಮಾಡುತ್ತೇನೆ ಎಂದು ವೃದ್ಧ ತಂದೆಯನ್ನು ಮಗ ವಂಚಿಸುವ ವಾಸ್ತವವನ್ನು ಮೋಹನ ಹಬ್ಬು ಅವರ 'ನೀರ ಮೇಲಣ ಗುಳ್ಳೆ' ಕತೆ ದಾಖಲಿಸಿದೆ. ಇವೆರಡೂ ಕತೆಗಳು ಅತ್ಯಂತ ಆಪ್ತ ಮತ್ತು ಶಕ್ತವಾಗಿ ಚಿತ್ರಿತವಾಗಿವೆ.

**ರಾಮಮನೋಹರ, ಮೈಸೂರು**

▶▶ 'ನೀರ ಮೇಲಣ ಗುಳ್ಳೆ' ಕತೆ ವರ್ತಮಾನದ ನೈಜ ಚಿತ್ರಣವಾಗಿದೆ. ಜೊತೆಗೆ ಅದು ಸಕಾಲಿಕವೂ ಹೌದು.

**ನಾರಾಯಣ ಯಾಜಿ, ಶಿರಾಲಿ**

▶▶ ಸ್ಮಿತಾ ಅಮೃತರಾಜ್ ಅವರ ಪ್ರಬಂಧ 'ಜ್ವರದ ಹಳಹಳಿಕೆಗಳು' ಸುಲಲಿತವಾಗಿ ಓದಿಸಿಕೊಂಡಿತು. ಜ್ವರ ಬಂದಾಗ ಆಗುವ ಅನುಭವಗಳು ವೈವಿಧ್ಯಮಯ. ಅವನ್ನು ಲಘುಧಾಟಿಯಲ್ಲಿ ಲೇಖಕಿ ಹಿಡಿದಿಟ್ಟಿದ್ದಾರೆ. ಝೆನ್ ಕತೆಗಳು ಯೋಚನೆಗೆ ಹಚ್ಚುವಂತಿದ್ದವು.

**ಸುಕನ್ಯಾ ಕೆ.ವಿ., ಸುಂಕದಕಟ್ಟೆ**

▶▶ ಈ ಸಂಚಿಕೆ ವೈವಿಧ್ಯಮಯ ಬರಹಗಳಿಂದ ಸೆಳೆಯುವಂತಿದೆ. ಬಿ.ಎಲ್. ವೇಣು ಅವರ 'ದನಗಳು', ನಾಗರಾಜ ವಸ್ತಾರೆ ಅವರ 'ಬಿಡಾಡಿ', ಶಾಂತಿ ಕೆ.ಎ. ಅವರ 'ಈ ಕತೆಗೆ ಹೆಸರಿಲ್ಲ' ಕತೆಗಳು ಮನಮೋಹಕವಾಗಿದ್ದವು. ಈ ಕತೆಗಳೊಂದಿಗೆ ಕೆ.ಟಿ. ಗಟ್ಟಿ ಅವರ ಸಂದರ್ಶನ ಈ ಬಾರಿಯ ಬೋನಸ್ ಆಗಿತ್ತು.

**ಬಿ.ಎಸ್. ಶಾಂತಾಕುಮಾರಿ, ಬಳ್ಳಾರಿ**